**ದಿನಾಂಕ 17.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ– ಶ್ರೀ ವಿ ಎಂ ಕೆ ವಾದಿಯ ಪರ ವಕೀಲರಿಂದಃ–**

ನನ್ನ ಮುಖ್ಯ **ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಪ್ರಕಾರ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.**

ಈ ಪ್ರಕರಣದಲ್ಲಿ ನಾನು ನನ್ನ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 1 ರಿಂದ 8 ಎಂದು, ದಾವಾ ಆಸ್ತಿಯ ಡಿಮಾಂಡ್ ರಿಜಿಸ್ಟಾರ್ ನ್ನು ನಿಪಿ 9 ಎಂದು, ಪ್ರತಿವಾದಿಯರಿಗೆ ವಕೀಲರ ಮೂಲಕ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ 10 ಎಂದು, ಅಂಚೆ ರಸೀತಿಗಳನ್ನು ನಿಪಿ 11 ರಿಂದ 13, ಮರಳಿ ಬಂದ ಅಂಚೆ ಲಕೋಟೆಗಳನ್ನು ನಿಪಿ 14 ಮತ್ತು 15 ಎಂದು, ನನ್ನ ನೋಟಿಸಿಗೆ ಪ್ರತಿವಾದಿಯರು ನೀಡಿದ ಉತ್ತರ ನೋಟಿಸನ್ನು ಹಾಜರುಪಡಿಸಿದ್ದು ನಿಪಿ 16 ಎಂದು, ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ದಾಖಲೆಗಳನ್ನು ಹಾಜರುಪಡಿಸಲು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**

**ತಿ.ನರಸೀಪುರ.**